ಈ) ಹೌದು. ಪಂಚ ಸೌಲಭ್ಯದ ಕಾರ್ಯಕ್ರಮದಡಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಎಸ್.ಡಿ.ಎಂ.ಸಿ. ಅವರಿಗೆ ಅನುಮತಿ ನೀಡಲಾಗಿದೆ.

ಪಶು ವೈದ್ಯಕೀಯ ಕಾಲೇಜು ಕಟ್ಟಡ ಕಾಮಗಾರಿಯ ಬಗ್ಗೆ

100 (74): ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ): ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ನಗರದಲ್ಲಿರುವ ಪಶು ವೈದ್ಯಕೀಯ ಕಾಲೇಜು ಕಟ್ಟಡ ಕಾಮಗಾರಿಯು ಅಪೂರ್ಣವಾಗಿದ್ದು ಅಗತ್ಯ ಮೂಲ ಸೌಲಭ್ಯವಿಲ್ಲವೆಂದು ಪಶು ವೈದ್ಯಕೀಯ ಮಂಡಳಿ ಮಾನ್ಯತೆ ತಡೆಹಿಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಕಾಲೇಜು ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಯಾವ ಸೌಲಭ್ಯಗಳು ಬೇಕೆಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಮಾಡಿರುತ್ತಾರೆ. (ವಿವರ ನೀಡುವುದು);

ಆ) ಈ ಕಾಲೇಜು ಶಂಕು ಸ್ಥಾಪನೆಯಾದ ದಿನಾಂಕದಿಂದ ಡಿಸೆಂಬರ್ 2010 ರ ಅಂತ್ಯದವರೆಗೂ ಯಾವ ಯಾವ ಕಟ್ಟಡದ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ಹಾಗೂ ಮಾಡಲಾದ ವೆಚ್ಚವೆಷ್ಟು?

ಇ) ಈ ಕಾಲೇಜು ಕಟ್ಟಡಗಳ ಕಾಮಗಾರಿ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿದೆಯೇ?

ಈ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ರೇವೂನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು):

ಅ) ಬಂದಿಲ್ಲ. ಆದಾಗ್ಯೂ ಸರಕಾರಿ ಆದೇಶ ಸಂ:ಪಸಂಮೀ 81 ಪಸೇ 2006 (ಭಾಗ– 1) ದಿನಾಂಕ:3–8–2006ರಂತೆ ಪಶು ವೈದ್ಯಕೀಯ ಮಹಾವಿದ್ಯಾಲಯ ಶಿವಮೊಗ್ಗವು 2006–07 ರಿಂದ ಕಾರ್ಯಾರಂಭ ಮಾಡುತ್ತಿದೆ. ಭಾರತೀಯ ಪಶು ವೈದ್ಯಕೀಯ ಪರಿಷತ್ತಿನ ನಿಯಮಾವಳಿ ಗಳಂತೆ ಪಶುವೈದ್ಯಕೀಯ ಮಹಾವಿದ್ಯಾಲಯವು 18 ವಿವಿಧ ಬೋಧನಾ ವಿಭಾಗಗಳನ್ನು ಹೊಂದುವುದರ ಜೊತೆಗೆ ಮಹಾವಿದ್ಯಾಲಯದ ಆಡಳಿತ ಕಚೇರಿ, ಜಾನುವಾರು ಸಂಕೀರ್ಣಗಳು ಬೋಧನಾ ಚಿಕಿತ್ಸಾ ಸಂಕೀರ್ಣ,

ವಿದ್ಯಾರ್ಥಿಗಳ ವಸತಿ ನಿಲಯಗಳು, ಸಿಬ್ಬಂದಿ ವಸತಿ ಗೃಹಗಳು, ಗ್ರಂಥಾಲಯ, ಆಟದ ಮೈದಾನ ಹಾಗೂ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಹೊಂದುವ ಅಗತ್ಯ ಇರುತ್ತದೆ. ಈ ಮಾದರಿಯಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯ ಶಿವಮೊಗ್ಗ ಈಗಾಗಲೇ 157 ಎಕರೆ ವಿಸ್ತೀರ್ಣದ ಜಮೀನನ್ನು ಹೊಂದಿದ್ದು ಆವರಣದಲ್ಲಿ ಮಹಾವಿದ್ಯಾಲಯದ ಮುಖ್ಯ ಕಟ್ಟಡದ ಕಾಮಗಾರಿ ಹೊರತುಪಡಿಸಿ ಇನ್ನುಳಿದ ಸೌಲಭ್ಯಗಳನ್ನು ಒದಗಿಸಲಾಗಿದೆ. ಕಾಲೇಜಿನ ವಿದ್ಯಾರ್ಥಿಗಳು ಭಿನ್ನವತ್ತಳೆಯೊಂದನ್ನು ಸಲ್ಲಿಸಿ ಭಾರತೀಯ ಪಶುವೈದ್ಯಕೀಯ ಪರಿಷತ್ತು, ನವದೆಹಲಿಯಿಂದ ಮನ್ನಣೆ ಪಡೆಯಲು ಕೋರಲಾಗಿ ಅವರುಗಳಿಗೆ ರಾಜ್ಯ ಸರ್ಕಾರ ಮತ್ತು ಪಶುವೈದ್ಯಕೀಯ ವಿಶ್ವವಿದ್ಯಾಲಯ ಇದುವರೆವಿಗೂ ಮಾಡಿರುವ ಪ್ರಗತಿಯ ಬಗ್ಗೆ ವಿವರಿಸಲಾಗಿದೆ.

ಆ) ಶಿವಮೊಗ್ಗ ಪಶುವೈದ್ಯಕೀಯ ಮಹಾವಿದ್ಯಾಲಯ ಪ್ರಾರಂಭವಾದ ದಿನಾಂಕದಿಂದ ಕಟ್ಟಡ ಕಾಮಗಾರಿಗಳಿಗೆ ಒಟ್ಟು ರೂ. 3931.00 ಲಕ್ಷಗಳು ಬಿಡುಗಡೆಯಾಗಿದ್ದು ಅದರಲ್ಲಿ ಇದುವರೆವಿಗೆ ಕಾಮಗಾರಿ, ಉಪಕರಣ ಹಾಗೂ ಇತರೆ ಸಾದಿಲ್ವಾರು ಖರ್ಚುಗಳಿಗೆ ರೂ. 3606.84 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ವಿವರ ಕೆಳಕಂಡಂತಿರುತ್ತದೆ.

ಕ್ರ.ಸಂ	ಹಣಕಾಸಿನ ವರ್ಷ	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ಅನುದಾನದ ವಿನಿಯೋಗ		
			ಕಾಮಗಾರಿ	ಉಪಕರಣ ಪುಸ್ತಕ ಹಾಗೂ ಇತರೆಸಾದಿಲ್ವಾರು ಖರ್ಚು	ವೇತನ ಹಾಗೂ ಇತರೆ ವೆಚ್ಚ
1	2006– 07	844.00	827.00 ಭೂಸ್ವಾಧೀನ	32.85	30.72
2.	2007– 08	480.00	06.00	18.00	67.84
3.	2008– 09	800.00	984.60	42.00	80.50
4.	2009– 10	1307.00	950.84	95.09	146.98
5.	2010– 11	500.00	612.93	24.59	50.00
	ಒಟ್ಟು	3931.00	3018.27	212.53	376.04
		ಒಟ್ಟು ಖರ್ಚಾದ (1+2+3 =			3606.84)

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.